# ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ

## ಗಂಗಾ ಕಲ್ಯಾಣ ಯೋಜನೆಯ ಅನುಷ್ಠಾನದ ವಿವರ:-

➢ **ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಪಡೆಯಲು ಅರ್ಜಿದಾರರಿಗೆ ಇರಬೇಕಾದ ಅರ್ಹತೆಗಳು:-**

- ಅರ್ಜಿದಾರರು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು.
- ಅರ್ಜಿದಾರರು ಕನಿಷ್ಠ ಕಳೆದ 15 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿರಬೇಕು.
- ಅರ್ಜಿದಾರರು 18 ರಿಂದ 60 ವರ್ಷಗಳ ವಯೋಮಿತಿಯೊಳಗಿರಬೇಕು.
- ಕುಟುಂಬದ ವಾರ್ಷಿಕ ಆದಾಯ ಗ್ರಾಮೀಣ ಪ್ರದೇಶದ ಫಲಾಫೇಕ್ಷಿಗಳಿಗೆ ರೂ. 1,50,000/- ಮತ್ತು ನಗರ ಪ್ರದೇಶಗಳ ಫಲಾಫೇಕ್ಷಿಗಳಿಗೆ ರೂ 2,00,000/-ಗಳಿಗಿಂತ ಮೀರಿರಬಾರದು.
- ಅರ್ಜಿದಾರರು ಸಣ್ಣ/ಅತೀಸಣ್ಣ ಹಿಡುವಳಿದಾರರಾಗಿರಬೇಕು.
- ಫಲಾನುಭವಿಗಳು ಕನಿಷ್ಟ 1½ ಎಕರೆಯಿಂದ 5.00 ಎಕರೆ ಜಮೀನು ಹೊಂದಿರಬೇಕು.
- ಕರಾವಳಿ/ಮಲೆನಾಡು ಜಿಲ್ಲೆಗಳಾದ ಉಡುಪಿ. ಮಂಗಳೂರು, ಮಡಿಕೇರಿ, ಉತ್ತರ ಕನ್ನಡ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳ ಫಲಾಫೇಕ್ಷಿಗಳು ಕನಿಷ್ಟ 1.00 ಎಕರೆಯಿಂದ 5.00 ಎಕರೆ ಜಮೀನು ಹೊಂದಿರಬೇಕು.
- ಅರ್ಜಿದಾರರ ಕುಟುಂಬದ ಯಾವುದೇ ಸದಸ್ಯರು ಸರ್ಕಾರಿ/ಅರೆ ಸರ್ಕಾರಿ ನೌಕರಿಯಲ್ಲಿರಬಾರದು.
- ಅರ್ಜಿದಾರರಾಗಲೀ, ಕುಟುಂಬದ ಸದಸ್ಯರಾಗಲೀ ನಿಗಮದ ಯಾವುದೇ ಯೋಜನೆಯಡಿ ಈ ಹಿಂದೆ ಸೌಲಭ್ಯವನ್ನು ಪಡೆದಿರಬಾರದು. (ಭೂ ಒಡೆತನ ಯೋಜನೆಯಡಿ ಖುಷ್ಕಿ ಜಮೀನು ಪಡೆದ ಫಲಾನುಭವಿಗಳಿಗೆ ಈ ನಿಯಮವು ಅನ್ವಯಿಸುವುದಿಲ್ಲ.)
- ಮೇಲ್ಕಾಣಿಸಿದ ಅಗತ್ಯ ದಾಖಲಾತಿಗಳನ್ನು ಕಂದಾಯ ಇಲಾಖೆಯಿಂದ ಪಡೆದುಕೊಳ್ಳಬೇಕು.

**ಗಂಗಾ ಕಲ್ಯಾಣ ಯೋಜನೆಯಡಿ ಫಲಾಫೇಕ್ಷಿಗಳನ್ನು ಆಯಾ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರ ಅಧ್ಯಕ್ಷತೆಯಲ್ಲಿ ಆಯ್ಕೆ ಮಾಡಲು ಈ ಕೆಳಕಂಡಂತೆ ಸರ್ಕಾರದಿಂದ ಸಮಿತಿ ರಚಿಸಲಾಗಿರುತ್ತದೆ:-**

| | | |
|---|---|---|
| 01 | ವಿಧಾನಸಭಾ ಕ್ಷೇತ್ರದ ಶಾಸಕರು | ಅಧ್ಯಕ್ಷರು |
| 02 | ತಾಲ್ಲೂಕಿನಲ್ಲಿ ಖಾಯಂ ಆಗಿ ವಾಸಿಸುತ್ತಿರುವ ವಿಧಾನ ಪರಿಷತ್ತಿನ ಸದಸ್ಯರು | ಉಪಾಧ್ಯಕ್ಷರು |
| 03 | ಆಯಾ ಲೋಕಸಭಾ ಕ್ಷೇತ್ರ ಸದಸ್ಯರು | ಸದಸ್ಯರು |
| 04 | ಆಯಾ ರಾಜ್ಯಸಭಾ ಕ್ಷೇತ್ರದಲ್ಲಿ ಖಾಯಂ ಆಗಿ ವಾಸಿಸುವಂತಹ ರಾಜ್ಯಸಭಾ ಸದಸ್ಯರು | ಸದಸ್ಯರು |
| 05 | ತಾಲ್ಲೂಕು ಕಾರ್ಯ ನಿರ್ವಹಣಾಧಿಕಾರಿ | ಸದಸ್ಯರು |
| 06 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ಪಂಚಾಯತ್ | ಸದಸ್ಯರು |
| 07 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 08 | ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ವಿದ್ಯುತ್‌ಶಕ್ತಿ ಮಂಡಳಿ (ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ) | ಸದಸ್ಯರು |
| 09 | ತಾಲ್ಲೂಕು ಸಹಾಯಕ ನಿರ್ದೇಶಕರು, ಕೈಗಾರಿಕಾ ಇಲಾಖೆ | ಸದಸ್ಯರು |
| 10 | ಸಂಬಂಧಿಸಿದ ತಾಲ್ಲೂಕು ತಹಶೀಲ್ದಾರರು | ಸದಸ್ಯರು |
| 11 | ತಾಲ್ಲೂಕು ಸಹಾಯಕ ನಿರ್ದೇಶಕರು, ಕೃಷಿ ಇಲಾಖೆ | ಸದಸ್ಯರು |
| 12 | ತಾಲ್ಲೂಕಿನ ಸಹಾಯಕ ನಿರ್ದೇಶಕರು, ತೋಟಗಾರಿಕೆ ಇಲಾಖೆ | ಸದಸ್ಯರು |
| 13 | ಸಂಬಂಧಿಸಿದ ಜಿಲ್ಲೆಯ ಅರಣ್ಯಾಧಿಕಾರಿ | ಸದಸ್ಯರು |
| 14 | ಹಿಂದುಳಿದ ವರ್ಗಗಳ ಇಲಾಖೆಯ ನಿರೀಕ್ಷಕರು | ಸದಸ್ಯರು |
| 15 | ಕರ್ನಾಟಕ ಪರಿಶಿಷ್ಟ ಜಾತಿ/ವರ್ಗಗಳ ಅಭಿವೃದ್ಧಿ ನಿಗಮದ ತಾಲ್ಲೂಕು ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು | ಸದಸ್ಯ ಕಾರ್ಯದರ್ಶಿ |

## ಗಂಗಾ ಕಲ್ಯಾಣ ಯೋಜನೆಯಡಿ ಸೌಲಭ್ಯ ಒದಗಿಸಲು ಈ ಕೆಳಕಂಡ ದಾಖಲಾತಿಗಳನ್ನು ಪಡೆದು ಅನುಷ್ಠಾನಗೊಳಸಬೇಕು:

1. ಗಂಗಾ ಕಲ್ಯಾಣ ಯೋಜನೆಯಡಿ ಅರ್ಜಿಗಳನ್ನು ಆಹ್ವಾನಿಸಬೇಕು.
2. ಅರ್ಜಿಯ ಜೊತೆಯಲ್ಲಿ ಈ ಕೆಳಕಂಡ ದಾಖಲೆಗಳನ್ನು ಲಗತ್ತಿಸಬೇಕು.

    1. ಭಾವಚಿತ್ರ
    2. ಜಾತಿ ಪ್ರಮಾಣ ಪತ್ರ
    3. ಆದಾಯದ ಪ್ರಮಾಣ ಪತ್ರ
    4. ಪಹಣಿ
    5. ಸಣ್ಣ ರೈತರ ಪ್ರಮಾಣ ಪತ್ರ
    6. ರೇಷನ್ ಕಾರ್ಡ್
    7. ವಂಶವೃಕ್ಷ

3. ಅರ್ಜಿ ಜೊತೆಯಲ್ಲಿ ಎಲ್ಲಾ ದಾಖಲೆಗಳದ್ದಲ್ಲಿ ಮಾತ್ರ ಅರ್ಜಿಯನ್ನು ಸ್ವೀಕರಿಸಬೇಕು.
4. ಸ್ವೀಕರಿಸಿದ ಅರ್ಜಿಗಳನ್ನು ರಿಜಿಸ್ಟರ್‌ನಲ್ಲಿ ದಾಖಲಿಸಿಕೊಳ್ಳಬೇಕು.
5. ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕಡೆಯ ದಿನಾಂಕ ಮುಗಿದ ನಂತರ ಬಂದಿರುವ ಎಲ್ಲಾ ಅರ್ಜಿಗಳನ್ನು ವಿಧಾನಸಭಾ ಕ್ಷೇತ್ರವಾರು ಪಟ್ಟಿ ಮಾಡಿ, ದಾಖಲೆಗಳು ಸರಿ ಇರುವ ಹಾಗೂ ನಿಗಮದಲ್ಲಿ ಹಿಂದೆ ಸಾಲ ಪಡೆದಿಲ್ಲದಿರುವ ಬಗ್ಗೆ ದೃಡೀಕರಿಸಿಕೊಂಡು ಅರ್ಹ ಫಲಾಪೇಕ್ಷಿಗಳ ಪಟ್ಟಿಯನ್ನು ಮಾತ್ರ ಮಾನ್ಯ ಶಾಸಕರ ಆಯ್ಕೆ ಸಮಿತಿಗೆ ಮಂಡಿಸಬೇಕು.
6. ಆಯ್ಕೆ ಸಮಿತಿಯ ಸಭೆ ಕರೆಯಲು ಸೂಕ್ತ ದಿನಾಂಕ ಮತ್ತು ಸಮಯ ನೀಡುವಂತೆ ಮಾನ್ಯ ಶಾಸಕರಿಗೆ ಪತ್ರ ಕಳಸಬೇಕು.
7. ಆಯ್ಕೆ ಮಾಡುವಾಗ ಗುರಿಗೆ ತಕ್ಕಂತೆ ಮುಖ್ಯ ಪಟ್ಟಿಯನ್ನು ಮಾಡಿಕೊಂಡು, ಶೇಕಡ ೨೦ರಷ್ಟು ಕಾಯ್ದಿರಿಸಿದ ಪಟ್ಟಿಯನ್ನು ತಯಾರಿಸುವುದು. ಮುಖ್ಯ ಪಟ್ಟಿಯಲ್ಲಿನ ಯಾವುದೇ ಫಲಾಪೇಕ್ಷಿಗೆ ಸೌಲಭ್ಯ ಕಲ್ಪಿಸಲು ಸಾಧ್ಯವಿಲ್ಲದಿದ್ದರೆ (ಅರ್ಹರಿಲ್ಲದಿದ್ದಲ್ಲಿ, ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ, ಭೂಭೌತಿಕ ಸಮೀಕ್ಷೆಯಲ್ಲಿ ಸಫಲ ಜಲಬಿಂಧು ಸಿಗದಿದ್ದಲ್ಲಿ, ಕೊರೆದು ವಿಫಲವಾದಲ್ಲಿ ಇತ್ಯಾದಿ) ಅಂತಹ ಆಯ್ಕೆಯಾದ ಫಲಾಪೇಕ್ಷಿಗಳಗೆ ಲಿಖಿತವಾಗಿ ಹಿಂಬರ ನೀಡಿ ಹೆಚ್ಚುವರಿ ಪಟ್ಟಿಯಲ್ಲಿನ ಫಲಾಪೇಕ್ಷಿಗಳಗೆ ನಿಯಮಾನುಸಾರ ಸೌಲಭ್ಯ ಒದಗಿಸಲು ಅನುಕೂಲವಾಗುತ್ತದೆ. ಯಾವುದೇ ಕಾರಣಕ್ಕೂ ಮುಖ್ಯ ಪಟ್ಟಿಯ ಪ್ರಕರಣಗಳ ಬಗ್ಗೆ ಕ್ರಮಕೈಗೊಂಡು ಅಂತಿಮಗೊಳಸದೆ ಕಾಯ್ದಿರಿಸಿದ ಪಟ್ಟಿಗೆ ಹೋಗುವಂತಿಲ್ಲ.
8. ಆಯ್ಕೆಯಾದ ಫಲಾಪೇಕ್ಷಿಗಳ ಸ್ಥಳ ಪರಿಶೀಲನೆ ಮಾಡಿ ಅರ್ಹರಿರುವ ಬಗ್ಗೆ ನಿಗಮದ ಅಧಿಕಾರಿಗಳು ವರದಿ ತಯಾರಿಸಿಕೊಳ್ಳಬೇಕು.
9. ಅರ್ಹರೆಂದು ಕಂಡುಬಂದ ಎಲ್ಲಾ ಫಲಾಪೇಕ್ಷಿಗಳ ಪಟ್ಟಿಯನ್ನು ನಿಗಧಿಪಡಿಸಿದ ಗುತ್ತಿಗೆದಾರರಿಗೆ ನೀಡಿ, ಭೂಭೌತ ಸಮೀಕ್ಷೆ ನಡೆಸಿ ವರದಿ ಸಲ್ಲಿಸಲು ತಿಳಸುವುದು.
10. ಭೂಭೌತ ಸನೀಕ್ಷೆ ನಡೆಸುವ ಸಂದರ್ಭದಲ್ಲಿ DISHAANK APP ಮೂಲಕ ಫಲಾಪೇಕ್ಷಿ ನೀಡಿರುವ ಸರ್ವೇ ನಂಬರ್ ಮತ್ತು DISHAANK APP ನಲ್ಲಿ ತೋರಿಸುವ ಸರ್ವೇ ನಂಬರ್ ತಾಳೆಯಾಗಲೇಬೇಕು. ಈ ರೀತಿ APP ನಲ್ಲಿ ಪರಿಶೀಲಿಸಿದ ಸರ್ವೇ ನಂಬರ್‌ನ ಪೋಟೋ ಕಾಫಿಗಳೊಂದಿಗೆ ವರದಿ ಸಲ್ಲಿಸಬೇಕು.
11. ಸಫಲ ಜಲಬಿಂಧು ದೊರೆತ ಪ್ರಕರಣಗಳಲ್ಲಿ ಕೊಳವೆಬಾವಿ ಮಂಜೂರಾತಿ ಪತ್ರವನ್ನು ಫಲಾಪೇಕ್ಷಿಗಳಗೆ ಕಳಸಿ, ಕೆಳಕಂಡ ದಾಖಲಾತಿ ಸಲ್ಲಿಸಲು ತಿಳಸುವುದು.
12. ಜಮೀನಿನ ಮೇಲೆ ಬೋಜಾ ದಾಖಲಿಸಲು ನೀಡಿರುವ ಒಪ್ಪಿಗೆ ಪತ್ರವನ್ನು ಫಲಾಪೇಕ್ಷಿಯ ಕೈಯಲ್ಲೇ ಕಳಸಿ, ಸಂಬಂಧಪಟ್ಟ ತಹಶೀಲ್ದಾರ್ ಕಛೇರಿಗೆ ತಲುಪಿದ ಬಗ್ಗೆ ಸ್ವೀಕೃತಿ ಪಡೆಯಬೇಕು. ಅಲ್ಲದೇ,

ನಿಗಮದ ಬೋಜಾ ದಾಖಲಾಗಿರುವ ಪಹಣಿ ಪತ್ರಿಕೆಯ ಪ್ರತಿಯನ್ನು ಫಲಾಪೇಕ್ಷಿಯ ಮುಖಾಂತರ ತರಿಸಿ ಕಡತದಲ್ಲಿ ಜೋಡಿಸಿಕೊಳ್ಳುವುದು. (Simple Mortgage)

13. ಮೇಲ್ಕಂಡ ದಾಖಲೆಗಳನ್ನು ಪಡೆದ ನಂತರ, ಭೂಭೌತ ಸಮೀಕ್ಷೆಯ ವರದಿ ಆಧಾರದಲ್ಲಿ ಕೊಳವೆಬಾವಿ ಕೊರೆಯುವಂತೆ ಕಾರ್ಯಾದೇಶ ನೀಡುವುದು (ನಮೂನೆ-2ರಲ್ಲಿ ಕಾರ್ಯಾದೇಶ ನೀಡುವುದು.)

14. ಕೊಳವೆಬಾವಿ ಕೊರೆಯುವ ವೇಳೆ ನಿಗಮದ ಅಧಿಕಾರಿಗಳು ಸ್ಥಳದಲ್ಲಿ ಕಡ್ಡಾಯವಾಗಿ ಹಾಜರಿರಬೇಕು. ಒಂದು ವೇಳೆ ಕಾರಣಾಂತರಗಳಿಂದ ಸ್ಥಳದಲ್ಲಿ ಹಾಜರಿಲ್ಲದಿದ್ದಲ್ಲಿ ಫಲಾನುಭವಿಗೆ ಕೊರೆಯುವ ರಾಡ್‌ಗಳು ಎಷ್ಟು ಹೋಗಿವೆ ಎಂದು ಲೆಕ್ಕ ಮಾಡಿಕೊಂಡು ನಂತರದಲ್ಲಿ ಅಧಿಕಾರಿಗಳಿಗೆ ತಿಳಿಸತಕ್ಕದ್ದು.

15. ಕೊಳವೆಬಾವಿ ಕೊರೆಯುವ ಸಮಯದಲ್ಲಿ ನಿಗಮದ ತಾ.ಅ.ಅ./ಸಿಬ್ಬಂದಿ ಹಾಜರಿದ್ದು, ಕೊಳವೆಬಾವಿಯ G.P.S. Location, Logittude & Lattitude ಗಳನ್ನು ಕಡ್ಡಾಯವಾಗಿ ಹಾಗೂ ಕೊಳವೆಬಾವಿ ಕೊರೆದ ಆಳ ಮತ್ತು ಅಳವಡಿಸಿದ ಕೇಸಿಂಗ್ ಪೈಪ್‌ನ ವಿವರ, ನೀರಿನ ಇಳುವರಿ (VI-NOTCH Method ಮೂಲಕ) ಸೂಕ್ಷ್ಮವಾಗಿ ಪರಿಶೀಲಿಸಿಕೊಂಡು ನಮೂನೆ-3ರಲ್ಲಿ ನಿಖರವಾಗಿ ದಾಖಲಿಸಿಕೊಳ್ಳಬೇಕು. (ನಮೂನೆ-3ರಲ್ಲಿ) ಉಪಯೋಗಿಸಿದ ಕೇಸಿಂಗ್ ಪೈಪ್ ನಿಗದಿಪಡಿಸಿದ ವಿಶಿಷ್ಟತೆಗೆ ಅನುಗುಣವಾಗಿರುವ ಬಗ್ಗೆ ದೃಢೀಕರಿಸಿಕೊಳ್ಳಬೇಕು. ಇಲ್ಲದಿದ್ದಲ್ಲಿ, ಇದನ್ನು ನಮೂನೆಯಲ್ಲಿ ದಾಖಲಿಸಬೇಕು. ಕೊರೆಯುವಾಗ ನಿಗಧಿತ 1000 ಜಿ.ಪಿ.ಹೆಚ್.ಗಿಂತ ಹೆಚ್ಚಿನ ಪ್ರಮಾಣದ ನೀರು ದೊರೆತ ಸಂದರ್ಭದಲ್ಲಿ ಭಾವಚಿತ್ರ ತೆಗೆದು ನಮೂನೆ-2 (ಅ) ಜೊತೆ ಲಗತ್ತಿಸಿ ಕಳಸುವುದು.

16. ಈ ಮೇಲಿನ ಷರತ್ತಿಗೊಳಪಟ್ಟು ಕೊರೆದ ಕೊಳವೆಬಾವಿಗಳ ಬಿಲ್ಲುಗಳನ್ನು ಹಣ ಪಾವತಿಸಲು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವ ಸಂಧರ್ಬದಲ್ಲಿ ಈ ಕೆಳಕಂಡಂತೆ ಅನುಸರಿಸುವುದು.

1) ಕೊಳವೆ ಬಾವಿ ಕೊರೆಯುವ ಮೊದಲು ಮಾನ್ಯ ಶಾಸಕರ ಆಯ್ಕೆ ಸಮಿತಿಯಲ್ಲಿ ಆಯ್ಕೆಯಾಗಿರುವ ಬಗ್ಗೆ/ ಸಾಂಸ್ಥಿಕ ಕೋಟಾದಡಿ ಆಯ್ಕೆಯಾಗಿರುವ ಬಗ್ಗೆ ಮತ್ತೊಮ್ಮೆ ದೃಢೀಕರಿಸಿಕೊಂಡು ಕೊಳವೆ ಬಾವಿ ಕೊರೆಸುವುದು.
2) ತಾಲ್ಲೂಕು ಅಭಿವೃದ್ಧಿ ಆಧಿಕಾರಿ ಕೊಳವೆ ಬಾವಿ ಕೊರೆಯುವ ಸಂಧರ್ಬದಲ್ಲಿ ಫಲಾನುಭವಿಯೊಂದಿಗೆ ತೆಗೆಸಿದ ಭಾವಚಿತ್ರ ಹೊಂದಿರಬೇಕು,
3) ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿರುವ ಬಗ್ಗೆ ನಮೂನೆ 3 ಎ ರಲ್ಲಿ ದೃಡೀಕರಿಸಿರಬೇಕು,
4) ಒಂದು ವೇಳೆ ಕೊರೆಯುವ ಸಂಧರ್ಬದಲ್ಲಿ ಹೋಗಲು ಆಗದೇ ಇದ್ದ ಪಕ್ಷದಲ್ಲಿ ನಂತರದಲ್ಲಿ ಸ್ಥಳಕ್ಕೆ ಭೇಟಿ ನೀಡಿ ಕೊರೆದ ಕೊಳವೆ ಬಾವಿ ಆಳ ಕೇಸಿಂಗ್ ದೃಢೀಕರಿಸಿ ನಂತರದಲ್ಲಿ ತೆಗೆಸಿದ ಭಾವಚಿತ್ರದೊಂದಿಗೆ (ನಮೂನೆ-3) ಪ್ರ ಪತ್ರ 3 ರ ಪ್ರಮಾಣ ಪತ್ರದ ಕಲಂ 5 ರಲ್ಲಿ ನಮೂದಿಸಿ ಸಹಿ ಮಾಡಬೇಕು
5) ಹಣ ಪಾವತಿಗಾಗಿ ಬಿಲ್ಲುಗಳನ್ನು ಕೇಂದ್ರ ಕಛೇರಿಗೆ ಶಿಫಾರಸ್ಸು ಮಾಡುವ ಮೊದಲು ಪ್ರತಿ ಫಲಾನುಭವಿಯ ಆಳ ಕೇಸಿಂಗ್ ಮತ್ತೋಮ್ಮೆ ದೃಢೀಕರಿಸಿ ಸಹಿ ಮಾಡುವುದು.
6) ಎಂ.ಬಿ. ಪುಸ್ತಕದಲ್ಲಿ ಕಡ್ಡಾಯವಾಗಿ ಕೊರೆದ ಆಳ, ಕೇಸಿಂಗ್, ಮತ್ತು ಒಟ್ಟು ಮೊತ್ತದ ವಿವರಗಳನ್ನು ನಮೂದಿಸಿರುವ ಬಗ್ಗೆ ಪರಿಶೀಲಿಸಿ ಶಿಫಾರಸ್ಸು ಮಾಡಬೇಕು,
7) ಕೊರೆದ ಎಲ್ಲಾ ಕೊಳವೆ ಬಾವಿಗಳಲ್ಲಿಯೂ ತಾಲ್ಲೂಕು ಅಬಿವೃದ್ಧಿ ಅಧಿಕಾರಿಗಳು ಶೇ.100 ರಷ್ಟು ಕೊರೆಯುವ ಸಂದರ್ಭದಲ್ಲಿ ಅಥವಾ ನಂತರದಲ್ಲಿ ಪರಿಶೀಲಿಸಿದ ಬಗ್ಗೆ ಭಾವಚಿತ್ರದ ಹಿಂಬಾಗದಲ್ಲಿ ಸಹಿ ಮತ್ತು ಸೀಲು ಹಾಕಿ ಕಳುಹಿಸಬೇಕು.
8) ಅದೇ ರೀತಿ ಜಿಲ್ಲಾ ವ್ಯವಸ್ಥಾಪಕರು ಸಹ ಕೊಳವೆ ಬಾವಿ ಕೊರೆಯುವ ಸಂದರ್ಭದಲ್ಲಿ ಅಥವಾ ನಂತರದಲ್ಲಿ ಶೇ 25 ರಷ್ಟು ಪರಿಶೀಲಿಸಿದ ಬಗ್ಗೆ ಭಾವಚಿತ್ರದ ಹಿಂಬಾಗದಲ್ಲಿ ಸಹಿ ಮತ್ತು ಸೀಲು ಹಾಕಿ ಶಿಫಾರಸ್ಸು ಮಾಡಿ ಕಳುಹಿಸಬೇಕು.
9) ಉಪ ಪ್ರಧಾನ ವ್ಯವಸ್ಥಾಪಕರು ಶೇ.10ರಷ್ಟು ಪರಿಶೀಲಿಸಿದ ಬಗ್ಗೆ ಭಾವಚಿತ್ರದ ಹಿಂಬಾಗದಲ್ಲಿ ಸಹಿ ಮತ್ತು ಸೀಲು ಹಾಕಿ ಶಿಫಾರಸ್ಸು ಮಾಡಿ ಕಳುಹಿಸಬೇಕು.

10) ಕೇಂದ್ರ ಕಛೇರಿಗೆ ಹಣ ಪಾವತಿಗೆ ಬಿಲ್ಲುಗಳನ್ನು ಕಳುಹಿಸುವ ವೇಳೆ ಡ್ರಿಲ್ಲಿಂಗ್ ಮತ್ತು ಪಂಪ್‌ಸೆಟ್ ಬಿಲ್ಲುಗಳ ವಿವರಗಳನ್ನು ಕಡ್ಡಾಯವಾಗಿ ಲೆಗೆಸಿ ಡಾಟಾದಲ್ಲಿ ಎಂಟ್ರಿ ಮಾಡಿ ಕಳುಹಿಸುವುದು.

17. ಈ ರೀತಿಯಾಗಿ ಕೊಳವೆಬಾವಿ ಕೊರೆದ ಬಗ್ಗೆ ತಯಾರಿಸಲಾದ ನಮೂನೆ-3 ಮತ್ತು ಗುತ್ತಿಗೆದಾರರು ಸಲ್ಲಿಸಿರುವ ಬಿಲ್‌ಗಳನ್ನು ಸಂಬಂಧಪಟ್ಟ ದೃಡೀಕರಣಗಳ ನಂತರ ಜಿಲ್ಲಾ ವ್ಯವಸ್ಥಾಪಕರ ಕಛೇರಿಗೆ ಸಲ್ಲಿಸಿ, ಅವರ ಮೂಲಕ ಕೇಂದ್ರ ಕಛೇರಿಗೆ ಇತರೆ ದಾಖಲಾತಿಗಳೊಂದಿಗೆ ಕೊರಿಯರ್ ಅಥವಾ ಸ್ಪೀಡ್ ಪೋಸ್ಟ್ ಮುಖಾಂತರ ಕಳಿಸಬೇಕು.

18. ಬಿಲ್‌ಗಳನ್ನು ಕ್ರೋಢೀಕರಿಸಿ ಕೇಂದ್ರ ಕಛೇರಿಗೆ ಕಳಿಸಲು ಮುಂದಿನ ಕ್ರಮಕ್ಕಾಗಿ ಎಂದು ಬರೆಯಬಾರದು, ಕೊರೆದ ಕೊಳವೆ ಬಾವಿಗಳನ್ನು ಪರಿಶೀಲಿಸಿದ್ದು, ಗುತ್ತಿಗೆದಾರ ಕಂಪನಿಗೆ ಹಣ ಪಾವತಿಸಬಹುದಾಗಿರುತ್ತದೆ ಎಂದು ಮುಖಪತ್ರ ಶಿಫಾರಸ್ಸು ಮಾಡುವುದು.

19. ಕೊಳವೆಬಾವಿ ಕೊರೆದ 15 ದಿನಗಳೊಳಗಾಗಿ ಕಡ್ಡಾಯವಾಗಿ ಕೊಳವೆಬಾವಿ ಕೊರೆದಿರುವ ಮಾಹಿತಿಯನ್ನಾಧರಿಸಿ (ಆಳ, ಕೇಸಿಂಗ್ ಮತ್ತು ನೀರಿನ ಪ್ರಮಾಣ) ರಿಜಿಸ್ಟ್ರೇಷನ್ ಫಾರ್ಮ್ ಭರ್ತಿ ಮಾಡಿ, ಈ ಕೆಳಕಂಡ ದಾಖಲೆಗಳೊಂದಿಗೆ ಎಸ್ಕಾಂ ಕಛೇರಿಯಲ್ಲಿ ಆನ್-ಲೈನ್/ ಆಫ್-ಲೈನ್ ಮೂಲಕ ನೋಂದಾಯಿಸಬೇಕು.

1. ಆನ್-ಲೈನ್/ಆಫ್-ಲೈನ್ ನಲ್ಲಿ ನೋಂದಾಯಿಸುವ ವೇಳೆ ಗಂಗಾ ಕಲ್ಯಾಣ ಯೋಜನೆಯಡಿ ಸದರಿ ಕೊಳವೆಬಾವಿಯನ್ನು ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ವತಿತಿಂದ ಕೊರೆದಿರುವ ಬಗ್ಗೆ ನಮೂನೆ-3 ಹಾಗೂ ಆರ್‌ಟಿಸಿ (ಪಹಣಿ) ಗಳನ್ನು ಸಂಬಂಧಪಟ್ಟ ಎಸ್ಕಾಂಗೆ ಜಿಲ್ಲಾ ವ್ಯವಸ್ಥಾಪಕರ ದೃಢೀಕರಣದೊಂದಿಗೆ ಒಪ್ಪಿಸುವುದು.
2. ನೋಂದಣಿ ಶುಲ್ಕ ಮತ್ತು ಪ್ರಾರಂಭಿಕ ಭದ್ರತಾ ಠೇವಣಿ (ಐ.ಎಸ್.ಡಿ.), ಮೀಟರ್ ಭದ್ರತಾ ಠೇವಣಿ (ಎಂ.ಎಸ್.ಡಿ) ಹಾಗೂ ಮೀಟರ್ ಬಾಕ್ಸ್ ಶುಲ್ಕವನ್ನು (ಆಯಾ ಎಸ್ಕಾಂಗಳಲ್ಲಿ ನಿಗದಿಪಡಿಸಿರುವಂತೆ), ಸರಬರಾಜು ಮಾಡುವ ಪಂಪ್‌ಸೆಟ್ ಹೆಚ್.ಪಿ. ಆಧರಿಸಿ ಡಿ.ಡಿ. ಮುಖಾಂತರ ಪಾವತಿಸಬೇಕು. ಈ ಕಾರ್ಯವು ಕೊಳವೆಬಾವಿ ಕೊರೆದ ಒಂದು ವಾರದೊಳಗೆ ತಪ್ಪದೇ ಪೂರ್ಣಗೊಳಿಸಬೇಕು. ರಿಜಿಸ್ಟ್ರೇಷನ್ ಸಮಯದಲ್ಲಿಯೇ ಇವೆಲ್ಲವನ್ನೂ ಪಡೆಯುವುದಾಗಿ ಎಸ್ಕಾಂನವರು ತಿಳಿಸಿರುತ್ತಾರೆ. ಈ ಬಾಬ್ತು ತಗಲುವ ವೆಚ್ಚವನ್ನು ಒಟ್ಟಾರೆ ಘಟಕ ವೆಚ್ಚದಲ್ಲಿ ಭರಿಸುವುದು.

20. ಕೊಳವೆಬಾವಿ ಕೊರೆಯುವಾಗ ಟೆಂಡರ್ ನಿಬಂಧನೆಗಳಂತೆ ಉಪಯೋಗಿಸುತ್ತಿರುವ ಕೇಸಿಂಗ್ ಪೈಪ ಮತ್ತು ಆಳಗಳ ವಿವರಗಳನ್ನು 3ನೇ ತಪಾಸಣಾ ಸಂಸ್ಥೆಯಿಂದ ಪರಿಶೀಲನೆ ಮಾಡಲ್ಪಟ್ಟಿರುವ ಬಗ್ಗೆ ದೃಡೀಕರಣ ಪಡೆಯಬೇಕು.

21. ಕೊಳವೆಬಾವಿ ಕೊರೆಯುವಾಗ ಒಂದು ವೇಳೆ ಬಾವಿ ವಿಫಲವಾದಲ್ಲಿ, ನಮೂನೆ-3ರಲ್ಲಿ ದಾಖಲಿಸಿಕೊಂಡು, ಜಿಲ್ಲಾ ಕಛೇರಿಯಲ್ಲಿ ದಾಖಲೆ ಇಟ್ಟುಕೊಳ್ಳಬೇಕು. ಇಂತಹ ವಿಫಲ ಕೊಳವೆಬಾವಿಗಳನ್ನು ಕೂಡಲೇ ಕಲ್ಲು ಮಣ್ಣುಗಳಿಂದ ಮುಚ್ಚಬೇಕು. ಫಲಾನುಭವಿಗೆ ಜಮೀನಿನ ಮೇಲೆ ದಾಖಲಾದ ಬೋಜಾ ರದ್ದುಪಡಿಸಲು ಸಂಬಂಧಪಟ್ಟ ತಹಶಿಲ್ದಾರರಿಗೆ ಪತ್ರ ಕಳಿಸುವುದು.

22. ತದನಂತರದಲ್ಲಿ ಸದರಿ ಕೊಳವೆಬಾವಿಗೆ ಬೇಕಾದ ಪಂಪ್‌ಸೆಟ್ ಹಾಗೂ ಪೂರಕಗಳ ಲೆಕ್ಕಾಚಾರ ಮಾಡಿಕೊಂಡು ಸಹಾಯಧನಕ್ಕಿಂತ ಹೆಚ್ಚಿಗೆ ಬೇಕಾದ ಮೊತ್ತವನ್ನು ಲೆಕ್ಕಾಚಾರ ಮಾಡಬೇಕು. ಈ ಮೊತ್ತವು ಉಳಿದಿರುವ ಸಹಾಯಧನ ಮತ್ತು ರೂ, 50,000/- ಅವಧಿಸಾಲಕ್ಕೂ ಮೀರುವಂತಿದ್ದಲ್ಲಿ, ಹೆಚ್ಚುವರಿ ಮೊತ್ತವನ್ನು ಫಲಾನುಭವಿ ಪಾವತಿಸುವಂತೆ ತಿಳಿಸಬೇಕು.

1. ಲಭ್ಯವಿರುವ ಸಹಾಯಧನದಲ್ಲಿಯೇ ಆಗುವಂತಿದ್ದಲ್ಲಿ, ಪಂಪ್‌ಸೆಟ್ ಮತ್ತು ಪೂರಕಗಳನ್ನು ಸರಬರಾಜು ಮಾಡಿಸುವುದು.
2. ಉಳಿದ ಸಹಾಯಧನ ಮತ್ತು ರೂ, 50,000/-ದವರೆಗೆ ಎಷ್ಟು ಬೇಕಾಗುತ್ತದೋ ಅಷ್ಟು ಅವಧಿಸಾಲ ಮಂಜೂರು ಮಾಡಿಕೊಂಡು ಪಂಪ್‌ಸೆಟ್ ಸರಬರಾಜು ಮಾಡಿಸುವುದು. ಈ ಸಂದರ್ಭದಲ್ಲಿ ಫಲಾಪೇಕ್ಷಿಯ ಆರ್.ಟಿ.ಸಿ.ಯಲ್ಲಿ ನಿಗಮದ ಹೆಸರಿಗೆ ಭೋಜಾ ಕೂಡಿಸಿ ಕಡತದಲ್ಲಿರಿಸುವುದು.

೩. ಅವಧಿಸಾಲ ರೂ. ೫೦,೦೦೦/-ಕ್ಕಿಂತಲೂ ಹೆಚ್ಚಿಗೆ ಘಟಕ ಪೂರ್ಣಗೊಳಿಸಲು ಹಣ ತಗುಲುವುದಿದ್ದಲ್ಲಿ, ಈ ಹೆಚ್ಚುವರಿ ಮೊತ್ತವನ್ನು ಫಲಾನುಭವಿಯಿಂದ ನಿಗಮಕ್ಕೆ ಪಾವತಿಸಿಕೊಂಡು, ರಸೀದಿ ನೀಡಿ, ಪಂಪ್‌ಸೆಟ್ ಸರಬರಾಜು ಮಾಡಿಸುವುದು.

23. ಕೇಂದ್ರ ಕಛೇರಿಯಿಂದ ನೀಡಿರುವ ಕಾರ್ಯಾದೇಶದ ಆಧಾರದ ಮೇಲೆ ಪಂಪ್‌ಸೆಟ್ ಗುತ್ತಿಗೆದಾರರು ಪಂಪ್‌ಸೆಟ್ ಮತ್ತು ಪೂರಕಗಳನ್ನು ಸರಬರಾಜು ಮಾಡಲು ಬಂದಾಗ ಎಲ್ಲಾ ಸಾಮಗ್ರಿಗಳನ್ನು ೩ನೇ ತಪಾಸಣಾ ಸಂಸ್ಥೆಯಿಂದ ಪರಿಶೀಲಿಸಲ್ಪಟ್ಟಿರುವ ಬಗ್ಗೆ ದೃಢೀಕರಿಸಿಕೊಳ್ಳಬೇಕು. ಸರಬರಾಜು ಮಾಡಿದಾಗ ನಿಗಧಿಪಡಿಸಿದ ನಮೂನೆ-೪ಬಿ ನಲ್ಲಿ ಎಲ್ಲಾ ದಾಖಲಿಸಿಕೊಂಡು ಕೇಂದ್ರ ಕಛೇರಿಗೆ ಕಳಿಸಬೇಕು. ಎಲ್ಲಾ ಪಂಪ್‌ಸೆಟ್ ಮತ್ತು ಸಾಮಗ್ರಿಗಳ ಛಾವಚಿತ್ರ ತೆಗೆದು ೪ಆ ನೊಂದಿಗೆ ಲಗತ್ತಿಸಿ ಕಳಿಸುವುದು. (ನಮೂನೆ ಲಗತ್ತಿಸಿದೆ)

24. ನಮೂನೆ-೪ಬಿ ಗಳನ್ನು ಕ್ರೋಢೀಕರಿಸಿ ಮುಖಪತ್ರದೊಂದಿಗೆ ಕಳಿಸುವಾಗ ಸಲ್ಲಿಸಬೇಕಾದ ಕ್ರೋಢೀಕರಣದ ನಮೂನೆ ಲಗತ್ತಿಸಿದೆ. (ನಮೂನೆ-೪ಎ)

25. ಪಂಪ್‌ಸೆಟ್ ಮತ್ತು ಪೂರಕಗಳನ್ನು, ವಿಳಂಭವಿಲ್ಲದೆ ಕೊಳವೆಬಾವಿಗೆ ಅಳವಡಿಸಿ ನಿಗದಿಪಡಿಸಿದ ನಮೂನೆ-೪ಸಿ ನಲ್ಲಿ ಕೇಂದ್ರ ಕಛೇರಿಗೆ ಹಣ ಪಾವತಿಗಾಗಿ ಕಳಿಸಬೇಕು. ಅಳವಡಿಸಿದ ಬಗ್ಗೆ ಛಾವಚಿತ್ರ ತೆಗೆದು ನಮೂನೆ-೪ಇ ನೊಂದಿಗೆ ಲಗತ್ತಿಸಿ ಕಳಿಸುವುದು.

26. ಪಂಪ್‌ಸೆಟ್ ಅಳವಡಿಸಿದ ಕೂಡಲೇ ಕಂಪ್ಲೀಷನ್ ವರದಿ ಸಲ್ಲಿಸಬೇಕು.

27. ವಿದ್ಯುದ್ದೀಕರಣದ ಒಂದು ತಿಂಗಳೊಳಗೆ ಸ್ಥಳ ಪರಿಶೀಲನೆ ನಡೆಸಿ ನಮೂನೆ-೫ ಮತ್ತು ೬ರಲ್ಲಿ ಕೇಂದ್ರ ಕಛೇರಿಗೆ ಪೂರ್ಣಗೊಂಡ ವರದಿ ಕಳಿಸಬೇಕು.

28. ಪ್ರತಿ ಮಾಹೆ ಕೊಳವೆಬಾವಿಗಳ ವಿದ್ಯದ್ದೀಕರಣಗೊಳಿಸಿದ ಮತ್ತು ವಿದ್ಯುದ್ದೀಕರಣಕ್ಕೆ ಬಾಕಿ ಇರುವ ಮಾಹಿತಿಯನ್ನು ನಮೂನೆ-೩ಎ ಮತ್ತು ೩ಬಿ ನಲ್ಲಿ ಫಲಾನುಭವಿಗಳ ವಿವರಗಳೊಂದಿಗೆ ಕೇಂದ್ರ ಕಛೇರಿಗೆ ಕಳುಹಿಸುವುದು.

29. ಕೊರೆದ ಕೊಳವೆಬಾವಿಯು ವಿದ್ಯುದ್ದೀಕರಣವಾದ ದಿನಾಂಕದಿಂದ ಒಂದು ವರ್ಷದ ಅವಧಿಯನ್ನು ಗ್ಯಾರಂಟಿ ಅವಧಿ ಎಂದು ಪರಿಗಣಿಸಿದ್ದು, ಗ್ಯಾರಂಟಿ ಅವಧಿಯಲ್ಲಿ ಕೊಳವೆಬಾವಿ ವಿಫಲವಾದಲ್ಲಿ ಕೊಳವೆಬಾವಿ ಕೊರೆದ ಗುತ್ತಿಗೆದಾರರಿಗೆ ಡೆಬಿಟ್ ನೋಟ್ ನೀಡಿ, ಬದಲಿ ಕೊಳವೆಬಾವಿ ಕೊರೆಸಲು ಅವಕಾಶವಿರುತ್ತದೆ.

30. ಪಂಪ್‌ಸೆಟ್ ಸರಬರಾಜು ಮಾಡಿ, ಕೊಳವೆಬಾವಿಗೆ ಅಳವಡಿಸಿದ ದಿನಾಂಕದಿಂದ ಒಂದು ವರ್ಷದ ಅವಧಿಯನ್ನು ಗ್ಯಾರಂಟಿ ಅವಧಿ ಎಂದು ಪರಿಗಣಿಸಿದ್ದು, ಗ್ಯಾರಂಟಿ ಅವಧಿಯಲ್ಲಿ ಪಂಪ್‌ಸೆಟ್ ರಿಪೇರಿಗೆ ಬಂದಲ್ಲಿ ಸರಬರಾಜುದಾರರಿಗೆ ನೋಟೀಸ್ ನೀಡಿ, ಪಂಪ್‌ಸೆಟ್ ರಿಪೇರಿ ಮಾಡಲು ಅಥವಾ ಬದಲಿ ಪಂಪ್‌ಸೆಟ್ ಸರಬರಾಜು ಮಾಡಿಸಲು ಅವಕಾಶವಿರುತ್ತದೆ.

* * * * *